Sri MALI MARIYAPPA.—The variation is according to the seasonal conditions.

ಶ್ರೀ ಜಿ. ಎಕ್. ಪುಟ್ಟಣ್ಣ.—ಈಗ ಸರ್ಕಾರದವರು ಸ್ಥಾಪನೆ ಮಾಡಿರತಕ್ಕ ಈ ಅಗ್ರಿಕಲ್‌ಚರಲ್ ಕೋ-ಆಪರೇಟಿವ್ ಫಾರ್ಮಿಂಗ್‌ಗಳಿಗೆ ಏನಾದರೂ ಸಬ್-ಸಿಡಿ ವಗೈರೆಯನ್ನು ಕೊಡುತ್ತಿದ್ದಾರೆಯೆ ? ಹಾಗೆ ಕೊಡುತ್ತಿದ್ದಲ್ಲಿ ಎಕರೆಯೊಂದಕ್ಕೆ ಎಷ್ಟು ಸಬ್-ಸಿಡಿ ಕೊಡಲಾಗುತ್ತಿದೆ ?

ಶ್ರೀ ಮಾಲಮರಿಯಪ್ಪ.—ಸಾಲದ ರೂಪದಲ್ಲೂ ಮತ್ತು ಸಬ್-ಸಿಡಿ ರೂಪದಲ್ಲೂ ಸಹಾಯವನ್ನು ನೀಡಲಾಗಿದೆ.

ಶ್ರೀ ಜಿ. ಎಕ್. ಪುಟ್ಟಣ್ಣ.—ಎಕರೆಯೊಂದಕ್ಕೆ ಎಷ್ಟನ್ನು ಕೊಟ್ಟಿದ್ದೀರಿ ?

ಶ್ರೀ ಮಾಲಮರಿಯಪ್ಪ.—ಈ ಬಗ್ಗೆ ಬೇರೆ ಒಂದು ಪ್ರಶ್ನೆ ಕಳುಹಿಸಿದರೆ ಉತ್ತರ ಒದಗಿಸಬಹುದು.

Dr. R. NAGAN GOWDA.—May I know whether the cultivation in these farms, especially in Vallabhapura farm, is going on as well as in farms outside these areas ?

Sri N. RACHIAH.—I shall answer.

Mr. SPEAKER.—Yes.

Sri N. RACHIAH.—That will be examined. (*Laughter*).

ಶ್ರೀ ಎಂ. ರಾಮಪ್ಪ.—ಈ ಕೋ-ಆಪರೇಟಿವ್ ಫಾರಂಗಳ ಅಕ್ಕಪಕ್ಕದಲ್ಲಿರುವ ಜಮೀನಿನಲ್ಲಿ ಎಕರೆಯೊಂದಕ್ಕೆ ಖಾಸಗೀ ಜನರು 15-20 ಮಣ ಹತ್ತಿ ಬೆಳೆದಿರುತ್ತಾರೆಂಬ ಅಂಶ ಸರ್ಕಾರದವರ ಗಮನಕ್ಕೆ ಬಂದಿದೆಯೇ ?

ಅಧ್ಯಕ್ಷರು.—ಈ ವಿಚಾರವನ್ನು ಪರಿಶೀಲನೆ ಮಾಡುತ್ತೇವೆಂದು ಮಂತ್ರಿಗಳು ಆಗಲೆ ಉತ್ತರ ಕೊಟ್ಟಿದ್ದಾರೆ.

ಶ್ರೀ ಮಾಲ ಮರಿಯಪ್ಪ.—ಅವರು ಬೆಳೆಯುತ್ತಿರುವ ಬೆಳೆಗೂ ಮತ್ತು ಈ ಫಾರಂಗಳಲ್ಲಿ ಆಗುತ್ತಿರುವ ಬೆಳೆಗೂ ಅಲ್ಪ-ಸ್ವಲ್ಪ ವ್ಯತ್ಯಾಸವಿರಬಹುದು. ಆದರೆ ಪಕ್ಕದ ಜಮೀನಿನಲ್ಲಿ ಎಕರೆಗೆ 20 ಮಣ ಹತ್ತಿ ಆಗಿದೆ ಎಂಬ ಅಂಶ ನಮಗೆ ಗೊತ್ತಿಲ್ಲ.

Sri A. R. KARISIDDAPPA.—The Hon'ble Minister said that the Societies were Collective Co-operative Farming Societies. But now the tenants themselves are forming societies. Is there any difference between a Co-operative Farming Society and a Tenant Farming Society ?

Sri MALI MARIYAPPA.—There is not much difference. Each Society is being aided according to its particular needs and according to the local conditions.

Sri G. SIVAPPA.—After the failure of the Collective Farming Societies they converted themselves into Tenants Farming Societies and distributed land among themselves. The Hon'ble Minister knows it very well.

Mr. SPEAKER.—Please put a question.

Sri G. SIVAPPA.—Are the Government aware that the lands are being cultivated by individuals ?

Sri MALI MARIYAPPA.—The Hon'ble Member knows the facts that at that time I was given information that cultivation was going on plotwar basis. I wanted the Assistant Registrar to go into the matter and I can say authoritatively only after I get complete information.

Starting of High School at Magadi Road Extension, Bangalore.

*Q.—51. Smt. NAGARATHNAMMA (Gandhinagar).—

Will the Government be pleased to state :—

(*a*) whether it is a fact that the representatives of the Rate Payers' Association of Magadi Road Extension, Bangalore, had come to the Chief Minister to present a memorandum requesting to start a high school at Magadi Road Extension, Bangalore where about 40,000 Harijans and labourers reside ;

(*b*) whether it is a fact that the Chief Minister told the representatives of the Rate Payers' Associations that he would neither touch the memorandum nor grant a high school to the Magadi Road Extension ?

A.—Sri ANNA RAO GANAMUKHI (*Minister for Education*).—

(*a*) No.

(*b*) Does not arise in view of the reply given to (*a*) above.

ಶ್ರೀಮತಿ ನಾಗರತ್ನಮ್ಮ.—ನನ್ನ ಪ್ರಶ್ನೆ ಮುಖ್ಯ ಮಂತ್ರಿಗಳ ವಿಚಾರಕ್ಕೆ ಸಂಬಂಧಪಟ್ಟಿದ್ದಾಗಿದೆ. ಅದಕ್ಕೆ ವಿದ್ಯಾ ಮಂತ್ರಿಗಳೇಕೆ ಉತ್ತರ ಕೊಟ್ಟಿದ್ದಾರೆ ?

†ಶ್ರೀ ಅಣ್ಣಾರಾವ್ ಗಣಮುಖಿ.—ಈ ಪ್ರಶ್ನೆ ವಿದ್ಯಾಭ್ಯಾಸಕ್ಕೆ ಸಂಬಂಧಪಟ್ಟಿರುವುದರಿಂದ ಉತ್ತರ ಕೊಡತಕ್ಕ ಜವಾಬ್ದಾರಿ ನನ್ನ ಪಾಲಿಗೆಬಂದಿದೆ.

ಶ್ರೀಮತಿ ನಾಗರತ್ನಮ್ಮ.—ನಾನು ಕೇಳಿರತಕ್ಕ ಪ್ರಶ್ನೆಯಲ್ಲಿ ಮೆಮೊರ್ಯಾಂಡಮ್ಮನ್ನು ಮಾನ್ಯ ಮುಖ್ಯ ಮಂತ್ರಿಗಳು ತಿರಸ್ಕಾರ ಮಾಡಿದ್ದಾರೆಂದು ಕೇಳಿ

† Indicates that the remarks or speeches have not been revised by the member concerned.

ದ್ದೇನೆ. ಆ ವಿಚಾರ ನಿಜವೇ ಎನ್ನುವುದನ್ನು ವಿದ್ಯಾ ಮಂತ್ರಿಗಳು ಕೇಳಿ ಈ ಉತ್ತರ ಕೊಟ್ಟಿದ್ದಾರೆಯೇ?

ಶ್ರೀ ಅಣ್ಣಾರಾವ್ ಗಣಮುಖಿ.—ಆ ರೀತಿ ತಿರಸ್ಕಾರ ಮಾಡಲಿಲ್ಲವೆಂಬ ಉತ್ತರ ಬಂದನಂತರವೇ ಈ ಉತ್ತರವನ್ನು ಅಚ್ಚುಹಾಕಿಸಲಾಗಿದೆ.

ಶ್ರೀಮತಿ ನಾಗರತ್ನಮ್ಮ.—ಹಾಗಾದರೆ ತಿರಸ್ಕಾರ ಮಾಡಿದರೆಂಬ ಅಂಶ ನಿಜವಲ್ಲವೇನು?

ಶ್ರೀ ಅಣ್ಣಾರಾವ್ ಗಣವ ಖಿ.—ಅಲ್ಲ.

ಶ್ರೀಮತಿ ನಾಗರತ್ನಮ್ಮ.—ಹಾಗಾದರೆ ಅವರು ನನಗೂ ಮುಖ್ಯ ಮಂತ್ರಿಗಳಿಗೂ ಬರೆದಿರತಕ್ಕ ಕಾಗದವನ್ನೇ ಈಗ ಓದಿ ಹೇಳುತ್ತೇನೆ.

ಅಧ್ಯಕ್ಷರು.—ಆ ಕಾಗದವನ್ನು ತಾವೀಗ ಈ ಸಭೆಯಲ್ಲಿ ಓದುವುದಕ್ಕೆ ಅವಕಾಶವಿಲ್ಲ.

ಶ್ರೀಮತಿ ನಾಗರತ್ನಮ್ಮ.—ಹಾಗಾದರೆ ಈಗ ಈ ವಿಚಾರದಲ್ಲಿ ಯಾರದು ನುಳ್ಳು; ಯಾರದು ನಿಜ ಎಂಬುದನ್ನು ತಿಳಿದುಕೊಳ್ಳುವುದು ಹೇಗೆ?

ಅಧ್ಯಕ್ಷರು.—ಆ ಪತ್ರವನ್ನು ತಾವು ಮೊದಲೇ ನನ್ನ ಕಡೆಗೆ ಕೊಟ್ಟಿದ್ದರೆ ನಾನು ಆ ಬಗ್ಗೆ ಸಂಪೂರ್ಣ ವಿಚಾರ ಮಾಡಿ, ತಕ್ಕ ಮಾತುಗಳನ್ನು ತರಿಸಿಕೊಂಡು ನೋಡುತ್ತಿದ್ದೆನು. ತಾವು ಹೇಳತಕ್ಕ ವಿಚಾರ ನಿಜ, ಎನ್ನುವುದನ್ನು ತಾವು ಮೊದಲು ನಿರ್ಧರ ಮಾಡಿ ಕೊಂಡು, ಅನಂತರ ಆ ವಿಚಾರವನ್ನು ನನ್ನ ಕಡೆ ಕೊಡಿ, ನಾನು ವಿಚಾರ ಮಾಡುತ್ತೇನೆ.

Sri B. D. JATTI (Chief Minister).—It has not been in my nature to refuse any memorandum so far if I remember correctly. I am the last man to refuse any application. Even if I meet a poor man in the street I will be the first person to receive his application. I do not know how it is alleged.

ಶ್ರೀಮತಿ ನಾಗರತ್ನಮ್ಮ.—ಈ ಪೆ ಮೊರಾಂಡಂ ಕೊಟ್ಟಿರತಕ್ಕ ಜನರಲ್ಲೂ ಜವಾಬ್ದಾರಿಯುಳ್ಳ ಜನರು—ಎಂದರೆ ಪ್ರೊಸಿಡೆಂಟರೂ, ವೈಸ್ ಪ್ರೊಸಿಡೆಂಟರೂ ಇಂಥವರೆಲ್ಲ ಇದ್ದಾರೆ. ಹಾಗೆ ಅವರು ತಿಳಿಸಿರತಕ್ಕ ಅಂಶ ನುಳ್ಳಾಗಿದ್ದರೆ ಆ ರೀತಿ ಮುಖ್ಯ ಮಂತ್ರಿಗಳು ಅವರು ತಿಳಿಸಿರತಕ್ಕ ವಿಚಾರ ನುಳ್ಳೆಂಬುದಾಗಿ ಏಕೆ ಒಂದು ಪ್ರೆಸ್‌ನೋಟನ್ನು ಹೊರಡಿಸಬಾರದಾಗಿತ್ತು? ಅದೇ ರೀತಿ ಅವರಿಗೊಂದು ಉತ್ತರವನ್ನೇಕೆ ಬರೆಯ ಬಾರದಾಗಿತ್ತು?

Sri B. D. JATTI.—It is not possible to go on replying to every question. If I may explain the correct position, some people came and asked me whether it was the intention of the Government to sanction a Government High School for Magadi Road. I said "It is not the policy of Government to start High Schools in places where they are already existing. In spite of that if you want to give the application, I will accept it."

ಶ್ರೀಮತಿ ನಾಗರತ್ನಮ್ಮ.—ಸ್ವಾಮಿ ಅಧ್ಯಕ್ಷರೇ ಈ ವಿಚಾರವನ್ನು ತಾವೇ ಕತೆಯಂದಾಗಿ ತೀರ್ಮಾನ ಮಾಡಬೇಕು.

ಅಧ್ಯಕ್ಷರು.—ಅರ್ಜಿ ಕೊಟ್ಟಿರತಕ್ಕವರು ನನ್ನಇದರಿಗೆ ಹೇಳಿದರೆ ನಾನು ಅದನ್ನು ಒಪ್ಪಿಕೊಳ್ಳುತ್ತೇನೆಂದು ಮಂತ್ರಿಗಳು ಹೇಳುತ್ತಾರೆ.

ಶ್ರೀಮತಿ ನಾಗರತ್ನಮ್ಮ.—ಈಗ ಅವರು ನನಗೆ ಬರೆದಿರತಕ್ಕ ಪತ್ರವನ್ನು ತಮ್ಮ ಕೈಗೇ ಕೊಡುತ್ತೇನೆ. ಈ ಅಂಶವನ್ನು ತಾವೇ ತೀರ್ಮಾನ ಮಾಡಿ. ನೀವೂ ಅವರೂ ಇಬ್ಬರೂ ಸೇರಿ ತೀರ್ಮಾನ ಮಾಡಿ, ನನಗೆ ಆ ವಿಚಾರದಲ್ಲಿ ನಿಜಾಂಶವೇನೆಂಬುದನ್ನು ತಿಳಿಸಿ ಬೇಕು.

Sri C. J. MUCKANNAPPA.—Since how long this agitation to start a high school in Magadi Road is going on? What is the difficulty of the Government in the way of sanctioning a high school for that area?

Sri ANNA RAO GANAMUKHI.—The difficulty is that we had sanctioned five schools for the whole State during 1959-60. There were more deserving places.

Sri C.J. MUCKANNAPPA.—My question has not been answered. Since how long the question has been pending?

Sri ANNA RAO GANAMUKHI.—This is the first time that I received an application dated 27th June 1958 from Smt. Nagarathnamma.

Sri C. J. MUCKANNAPPA.—With reference to the clause (*a*) of the question, may I know whether it is the intention of this Government to say one thing and ignore the backward under-fed under dogs about 40,000 Harijans and labourers living in that area in regard to giving educational facilities? Is it the opinion of this benign Government, Majesty's Government, that the Harijans are so highly educated in that area that they want to refuse a high school?

Sri ANNA RAO GANAMUKHI.—The policy of the Government is to start high schools where there are no high schools in a taluk. In Bangalore there are many high schools where Harijans, backward classes and every class can make use of. High Schools cannot be opened where the students reside. But, they have to go and attend wherever they are started.